# ಶ್ರೀ ವಿಜಯೀಂದ್ರತೀರ್ಥ ಶ್ರೀಪಾದರು



**ಭಕ್ತಾನಾಂ ಮಾನಸಾಂಬೋಜ-**

**ಭಾನವೇ ಕಾಮಧೇನವೇ ।**

**ನಮತಾಂ ಕಲ್ಪತರವೇ**

**ಶ್ರೀ ಜಯೀಂದ್ರಗುರವೇ ನಮಃ ॥**

# ವಿಶ್ವನಂದಿನಿ ಲೇಖನಮಾಲೆ — 57

## ಮುದ್ದಾಗಿ ಇರಬೇಕು ಮುನಿಯೋಗಿಗಳಿಗೆ

ನಮ್ಮ ಮಾಧ್ವಪರಂಪರೆಯ ಮಹಾಜ್ಞಾನಿಗಳು ಶಾಸ್ತ್ರದಲ್ಲಿ ಹೇಳಲ್ಪಟ್ಟ ಮಹಾಸದ್ಗುಣಗಳ ಸಾಕಾರಮೂರ್ತಿಗಳು ಎನ್ನುವ ಮಾತಿಗೆ ಮತ್ತೊಂದು ದೃಷ್ಟಾಂತ ಶ್ರೀ ವಿಜಯೀಂದ್ರತೀರ್ಥ-ಶ್ರೀಪಾಂದಗಳವರು.

ಶ್ರೀಮದಾನಂದತೀರ್ಥರ ಪವಿತ್ರ ಪರಂಪರೆಯಾದ ಶ್ರೀ ಕವೀಂದ್ರತೀರ್ಥರ ಪರಂಪರೆಯ ಭೂಷಾಮಣಿಗಳಾದ, ಸಮಸ್ತ ಮಾಧ್ವಸಮಾಜಕ್ಕೆ ಜ್ಞಾನವನ್ನು ಅನುಗ್ರಹಿಸಿದ ಜ್ಞಾನಿವರ್ಯರಾದ ಶ್ರೀ ವಿಬುಧೇಂದ್ರತೀರ್ಥರಿಂದ ಮೂರನೆಯವರು ಶ್ರೀ ಸುರೇಂದ್ರತೀರ್ಥರು.

ಇವರ ಅದ್ಭುತವಾದ ತಪಸ್ಸಿನ ಪರಿ ಹೇಗಿತ್ತೆಂದರೆ, ದೇವರ ಹಸಿಬೆಯನ್ನು (ದೇವರ ಪೆಟ್ಟಿಗೆಯಿರುವ ಚೀಲ) ಹೆಗಲ ಮೇಲೆ ಹಾಕಿಕೊಂಡು ಯಾವ

ಬೇಯಿಸಿದ ಪದಾರ್ಥವನ್ನು ತಿನ್ನದೇ ಮೂರು ಬಾರಿ ಪವಿತ್ರ ಭರತಭೂಮಿಯನ್ನು ಪ್ರದಕ್ಷಿಣೆ ಮಾಡಿದ ಮಹಾನುಭಾವರು. ಪ್ರಾಯಃ ನಾವು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲದ ಅದ್ಭುತವಾದ ತಪಸ್ಸು. ಮೊದಲಿಗೆ ಕಾಲ್ನಡಿಗೆಯಲ್ಲಿ ತೀರ್ಥಯಾತ್ರೆ. ಎರಡನೆಯದಾಗಿ ಬಹಳ ಶಿಷ್ಯರನ್ನು ಜೊತೆಯಲ್ಲಿಟ್ಟುಕೊಂಡಿಲ್ಲ. ಒಬ್ಬರೋ ಇಬ್ಬರೋ ಶಿಷ್ಯರು ಅಷ್ಟೇ. ಎಲ್ಲದಕ್ಕಿಂತ ಮಹತ್ತ್ವದ್ದು ಎಂದರೆ ಅನ್ನಾಹಾರಗಳಿಲ್ಲ. ಕೇವಲ ಹಣ್ಣು, ಹಂಪಲುಗಳನ್ನು ಅದೂ ದಿವಸಕ್ಕೊಂದು ಬಾರಿ ಮಾತ್ರ ಸ್ವೀಕರಿಸಿ ಯಾತ್ರೆ ಮಾಡಬೇಕು. ಅದೂ ಸಹ ಒಂದೆರಡು ದಿವಸವಲ್ಲ, ಒಂದೆರಡು ತಿಂಗಳಲ್ಲ. ಹತ್ತಾರು ವರ್ಷಗಳವರೆಗೆ ನಡೆದ ಭೂಪ್ರದಕ್ಷಿಣೆ. ಪರಮಪವಿತ್ರವಾದ ಸಮಗ್ರ ಭರತಭೂಮಂಡಲಕ್ಕೆ ಮೂರು ಬಾರಿ ಪ್ರದಕ್ಷಿಣೆ ಬಂದ ಮಹಾನುಭಾವರು ಶ್ರೀ ಸುರೇಂದ್ರತೀರ್ಥರು.

ಮತ್ತೊಂದೆಡೆ ಮಧ್ವಸಿದ್ಧಾಂತದ ಆಧಾರಸ್ತಂಭರಾದ ಶ್ರೀಮಚ್ಚಂದ್ರಿಕಾಚಾರ್ಯರು. ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಪವಿತ್ರ ಪರಂಪರೆಯ ಶ್ರೀ ರಾಜೇಂದ್ರತೀರ್ಥರ

ಪೂರ್ವಾದಿ ಮಠದ  ತಪಸ್ವಿವರೇಣ್ಯರಾದ ಶ್ರೀ ಬ್ರಹ್ಮಣ್ಯತೀರ್ಥರ ಶಿಷ್ಯರಾಗಿ, ಜ್ಞಾನಿಮೂರ್ಧನ್ಯರಾದ ಶ್ರೀ ಶ್ರೀಪಾದರಾಜರ ಪರಮಪ್ರೇಮಾಸ್ಪದ ವಿದ್ಯಾಶಿಷ್ಯರಾಗಿ, ಪಕ್ಷಧರಮಿಶ್ರನಂತಹ ಪ್ರಕಾಂಡಪಂಡಿತರನ್ನು ಮಣಿಸಿ, ನ್ಯಾಯಾಮೃತ-ತರ್ಕತಾಂಡವ-ತಾತ್ಪರ್ಯಚಂದ್ರಿಕಾಗ್ರಂಥಗಳೆಂಬ ಸಾಟಿಯಿರದ ಗ್ರಂಥಗಳನ್ನು ರಚಿಸಿ, ವಿಜಯನಗರಸಾಮ್ರಾಜ್ಯದ ಆರು ಜನ ರಾಜರಿಗೆ ಗುರುಗಳಾಗಿ, ಕೃಷ್ಣದೇವರಾಯನ ಮೇಲೆ ಪೂರ್ಣಾನುಗ್ರಹವನ್ನು ಮಾಡಿ ಅವನಿಂದ ಅಭೂತಪೂರ್ವವಾಗಿ, ನ ಭೂತೋ ನ ಭವಿಷ್ಯತಿ ಎಂಬಂತೆ ರಾಜ್ಯವನ್ನಾಳಿಸಿ, ದೀನರನ್ನು ರಕ್ಷಿಸುತ್ತ, ಕೆರೆ ಭಾವಿಗಳಿನ್ನು ಕಟ್ಟಿಸಿ ಸಮಸ್ತರಿಗೂ ಉಪಕಾರವನ್ನು ಮಾಡಿದ ಮಹೋನ್ನತವ್ಯಕ್ತಿತ್ವ ಶ್ರೀಮಚ್ಚಂದ್ರಿಕಾಚಾರ್ಯರದು.

ಇಂಥ ಇಬ್ಬರು ಮಹಾನುಭಾವರ ಅಚ್ಚುಮೆಚ್ಚಿನ ಪ್ರೀತಿಗೆ ಪಾತ್ರರಾದ ಮಹಾನುಭಾವರು ನಮ್ಮ ಶ್ರೀ ವಿಜಯೀಂದ್ರತೀರ್ಥಶ್ರೀಪಾದಂಗಳವರು. ಪ್ರಾಯಃ ಪುರಂದರದಾಸರು **“ಮುದ್ದಾಗಿ ಇರಬೇಕು**

**ಮುನಿಯೋಗಿಗಳಿಗೆ"** ಎಂಬ ಮಾತನ್ನು ಶ್ರೀ ವಿಜಯೀಂದ್ರರನ್ನು ಕಂಡೇ ಆಡಿದ್ದಾರೆಂದೆನಿಸುತ್ತದೆ.

ಶ್ರೀಮಚ್ಚಂದ್ರಿಕಾಚಾರ್ಯರ ಬಳಿಯಲ್ಲಿ ಅನೇಕ ಜನ ಸಾಧಕರು ಸಂನ್ಯಾಸವನ್ನು ಸ್ವೀಕರಿಸಿ ಅಧ್ಯಯನ ಮಾಡಿ ಜೀವನವನ್ನು ಸಾರ್ಥಕ ಮಾಡಿಕೊಂಡಿದ್ದಾರೆ. ಕೇಶವತೀರ್ಥರು, ನಾರಾಯಣತೀರ್ಥರು, ಮಾಧವತೀರ್ಥರು, ಗೋವಿಂದ ಒಡೆಯರು, ವಿಷ್ಣುತೀರ್ಥರು, ಮಧುಸೂದನತೀರ್ಥರು ಎಂದಾಗಿ ಕೇಶವಾದಿ 24 ಹೆಸರಗಳನ್ನು ಪಡೆದಿದ್ದ ಯತಿವರ್ಯರು ಶ್ರೀಮಚ್ಚಂದ್ರಿಕಾಚಾರ್ಯರ ಶಿಷ್ಯರಾಗಿದ್ದರು. ಆ ಇಪ್ಪತ್ತನಾಲ್ಕು ಜನ ಶಿಷ್ಯ ಯತಿವರೇಣ್ಯರ ಮಧ್ಯದಲ್ಲಿನ ಶ್ರೀ ವಿಷ್ಣುತೀರ್ಥರು ಚಂದ್ರಿಕಾಚಾರ್ಯರ ಅಚ್ಚುಮೆಚ್ಚಿನ ಶಿಷ್ಯರು.

ಶ್ರೀ ಸುರೇಂದ್ರತೀರ್ಥರು ಮೂರು ಬಾರಿ ಸಮಗ್ರ ಭೂಪ್ರದಕ್ಷಿಣೆಯನ್ನು ಮುಗಿಸಿ ಶಿಷ್ಯಸ್ವೀಕಾರ ಮಾಡುವ ಉದ್ದೇಶದಿಂದ ಶ್ರೀಮಚ್ಚಂದ್ರಿಕಾಚಾರ್ಯರ ಬಳಿ ಬರುತ್ತಾರೆ. ಶ್ರೀಮಚ್ಚಂದ್ರಿಕಾಚಾರ್ಯರು ತುಂಬ ಆತ್ಮೀಯತೆ, ಗೌರವ, ಸ್ನೇಹಗಳಿಂದ ಶ್ರೀ ಸುರೇಂದ್ರತೀರ್ಥರನ್ನು

ಸ್ವಾಗತಿಸುತ್ತಾರೆ. ಹತ್ತಾರುವರ್ಷಗಳ ಕಾಲ ಉಪವಾಸವಿದ್ದ ಮಹಾನುಭಾವರು ತಮ್ಮ ಭೂಪ್ರದಕ್ಷಿಣೆಯನ್ನು ಮುಗಿಸಿ, ಉಪವಾಸವ್ರತವನ್ನು ಮುಗಿಸಿ ಪರಮಾತ್ಮನಿಗೆ ನಿವೇದಿಸಿದ ಅನ್ನವನ್ನು ಸ್ವೀಕರಿಸಲು ನಿರ್ಧರಿಸುತ್ತಾರೆ. ರಾಜಗುರುಗಳಾದ ಶ್ರೀಮಚ್ಚಂದ್ರಿಕಾಚಾರ್ಯರೇ ಸ್ವಯಂ ಆದರದಿಂದ ಅವರ ಭಿಕ್ಷೆಯ ಏರ್ಪಾಟು ಮಾಡಿಸಿರುತ್ತಾರೆ. ಪ್ರತೀನಿತ್ಯ ಊಟ ಮಾಡುವವರು ಸಿಕ್ಕಾರು, ಆದರೆ ಹತ್ತಾರು ವರ್ಷಗಳ ಕಾಲ ಉಪವಾಸದ ವ್ರತದಲ್ಲಿ ಭರತಭೂಮಿಯನ್ನು ಪ್ರದಕ್ಷಿಣೆಯನ್ನು ಮಾಡಿಬಂದ ಯೋಗಿವರ್ಯರು ತಮ್ಮ ದೀಕ್ಷೆಯನ್ನು ಮುಗಿಸಿ ಇಂದು ಅನ್ನವನ್ನು ಸ್ವೀಕರಿಸುತ್ತಿದ್ದಾರೆ. ಹೀಗಾಗಿ ಭಾಗವತೋತ್ತಮರಾದ ಶ್ರೀ ಚಂದ್ರಿಕಾಚಾರ್ಯರು ಆದರದಿಂದ ತಮ್ಮ ಮಠದಲ್ಲಿಯೇ ಶ್ರೀ ಸುರೇಂದ್ರತೀರ್ಥರಿಗೆ ಭಿಕ್ಷೆಯ ಏರ್ಪಾಟು ಮಾಡಿಸಿದ್ದಾರೆ. ಶ್ರೀ ಸುರೇಂದ್ರರು ಭಗವದಾರಧನೆಯನ್ನು ಮುಗಿಸಿ, ಅನ್ನಾದಿಗಳನ್ನು ಪರಮಾತ್ಮನಿಗೆ ಭಕ್ತಿಯಿಂದ ಸಮರ್ಪಣೆ ಮಾಡಿ, ತಮ್ಮ ಉಪವಾಸದ ಯಾತ್ರೆಯ ಫಲವನ್ನೂ ಶ್ರೀಹರಿಗೆ ಸಮರ್ಪಿಸಿ ಆ ಹರಿಯ ನೈವೇದ್ಯವನ್ನು

ಸ್ವೀಕರಿಸಲು ಕುಳಿತಿದ್ದಾರೆ. ಪಕ್ಕದಲ್ಲಿಯೇ ಶ್ರೀಮಚ್ಚಂದ್ರಿಕಾಚಾರ್ಯರೂ ಊಟಕ್ಕೆ ಕುಳಿತಿದ್ದಾರೆ. ಅವರ ಜೊತೆಯಲ್ಲಿಯೇ ಚಂದ್ರಿಕಾಚಾರ್ಯರ ಎಲ್ಲ ಸಂನ್ಯಾಸಿಶಿಷ್ಯರೂ ನೈವೇದ್ಯಸ್ವೀಕಾರಕ್ಕಾಗಿ ಕುಳಿತಿದ್ದಾರೆ. ನೆರೆದ ಪಂಡಿತರು ಭಕ್ತಿಯಿಂದ ಗುರುಪರಂಪರೆಯನ್ನು ಸ್ಮರಿಸಿ, ಶ್ರೀಮದಾಚಾರ್ಯರನ್ನು ಸ್ಮರಿಸಿ, ಸರ್ವಭೋಕ್ತಾರನಾದ ಶ್ರೀಹರಿಯನ್ನು ಸ್ಮರಿಸಿ ಭಿಕ್ಷೆಯ ಕೃಷ್ಣಾರ್ಪಣ ಹೇಳುತ್ತಿದ್ದಾರೆ. ಶ್ರೀ ಸುರೇಂದ್ರತೀರ್ಥರು ಕೈಯಲ್ಲಿ ಅಪೋಶನವನ್ನು ಹಿಡಿದು ದೇವರ ಸ್ಮರಣೆ ಮಾಡಿ ಇನ್ನೇನು ಆಪೋಶನವನ್ನು ಸ್ವೀಕರಿಸಬೇಕು ಎನ್ನುವಷ್ಟರಲ್ಲಿ, ಕಣ್ಣನ್ನು ತೆರೆದು ಪಕ್ಕದಲ್ಲಿ ಕುಳಿತಿದ್ದ ಶ್ರೀ ಚಂದ್ರಿಕಾಚಾರ್ಯರನ್ನು ಮಾತನಾಡಿಸುತ್ತಾರೆ.

ಇನ್ನೇನು ಆಪೋಶನ ಸ್ವೀಕರಿಸಬೇಕು ಎನ್ನುವಷ್ಟರಲ್ಲಿ ತಮ್ಮೆಡೆಗೆ ತಿರುಗಿದ ಶ್ರೀ ಸುರೇಂದ್ರತೀರ್ಥರನ್ನು ಕಂಡು ಏನೆಂದು ಹೇಳಿ ಎಂದು ಆತ್ಮೀಯತೆಯಿಂದ ನುಡಿಯುತ್ತಾರೆ, ಚಂದ್ರಿಕಾಚಾರ್ಯರು. ಆಗ ಶ್ರೀ ಸುರೇಂದ್ರತೀರ್ಥರು ನೀವು ನಿಮ್ಮ ಶಿಷ್ಯರಾದ ವಿಷ್ಣುತೀರ್ಥರನ್ನು ನನಗೆ

ನೀಡಬೇಕು, ನಮ್ಮ ಪರಂಪರೆಯಲ್ಲಿ ಅವರು ಮುಂದುವರೆಯಲಿ, ನೀವು ನೀಡುತ್ತೇನೆಂದರೆ ನಾನು ಸಂತೋಷದಿಂದ ಊಟ ಮಾಡುತ್ತೇನೆ ಎನ್ನುತ್ತಾರೆ.

ತಮ್ಮ ಎಲ್ಲ ಶಿಷ್ಯರಲ್ಲಿಯೇ ವಿಷ್ಣುತೀರ್ಥರು ತಮಗೆ ಅಚ್ಚುಮೆಚ್ಚು. ಅದ್ಭುತವಾದ ಮೇಧಾಶಕ್ತಿ. ಪರಿಪೂರ್ಣವಾದ ವಿನಮ್ರತೆ. ಪರಿಶುದ್ಧವಾದ ವಿಷ್ಣುಭಕ್ತಿ. ನಿಷ್ಕಳಂಕವಾದ ವೈರಾಗ್ಯ. ಈ ಎಲ್ಲ ಸದ್ಗುಣಗಳ ಖನಿ ತಮ್ಮ ಶಿಷ್ಯರಾದ ಈ ವಿಷ್ಣುತೀರ್ಥರು. ಅವರನ್ನು ತಮ್ಮ ಪರಂಪರೆಯ ಉತ್ತರಾಧಿಕಾರಿಗಳನ್ನಾಗಿ ಮಾಡಿಕೊಳ್ಳಲು ಶ್ರೀ ಸುರೇಂದ್ರರು ಬಯಸುತ್ತಿದ್ದಾರೆ. ತಮ್ಮ ಪರಮಪ್ರೇಮಾಸ್ಪದ ಶಿಷ್ಯ ಆಚಾರ್ಯರ ಮತ್ತೊಂದು ಮಹಾನ್ ಪರಂಪರೆಯನ್ನು ಬೆಳಗಲು ಮುಂದಾಗಬೇಕು.  ಹರಿಚಿತ್ತ ಎಂದರಿತ ಶ್ರೀಮಚ್ಚಂದ್ರಿಕಾಚಾರ್ಯರು ಸಂತೋಷದಿಂದ ಹಾಗೇ ಆಗಲಿ ಎಂದು ನುಡಿಯುತ್ತಾರೆ. ನನ್ನ ಶಿಷ್ಯನನ್ನು ನಿಮಗೆ ನೀಡಿದ್ದೇನೆ, ನೀವು ಸಂತೋಷದಿಂದ ನೈವೇದ್ಯವನ್ನು ಸ್ವೀಕರಿಸಿ ಎಂದರೆ, ಪರಮಾತ್ಮನ ಭೂರಿ ಅನುಗ್ರಹವನ್ನು ಭಕ್ತಿಯಿಂದ

ಸ್ಮರಿಸಿ, ಚಂದ್ರಿಕಾಚಾರ್ಯರ ಆತ್ಮೀಯತೆಯನ್ನು ಮನಸಾರೆ ಅಭಿನಂದಿಸಿ ಶ್ರೀ ಸುರೇಂದ್ರತೀರ್ಥಶ್ರೀಪಾದಂಗಳವರು ಅಪೋಶನವನ್ನು ಸ್ವೀಕರಿಸುತ್ತಾರೆ.

ಆ ಬಳಿಕ ವಿಷ್ಣುತೀರ್ಥರನ್ನು ಶಿಷ್ಯರನ್ನಾಗಿ ಸ್ವೀಕರಿಸಿ, ಮತ್ತೊಮ್ಮೆ ದಂಡಪಲ್ಲಟವನ್ನು ಮಾಡಿ ಶ್ರೀ ವಿಜಯೀಂದ್ರತೀರ್ಥರು ಎಂಬ ಅನ್ವರ್ಥಕ ಹೆಸರನ್ನು ನೀಡಿ ತಮ್ಮ ಉತ್ತರಾಧಿಕಾರಿಗಳನ್ನಾಗಿ ಮಾಡುತ್ತಾರೆ ಶ್ರೀ ಸುರೇಂದ್ರತೀರ್ಥರು.

“ಸುರೇಂದ್ರರು ಪುತ್ರಭಿಕ್ಷವ ಬೇಡೆ ವಿಜಯೀಂದ್ರನ ಕರುಣಿಸದವನುದ್ಧರಿಸಿದ ಕಾರಣ ಗುರು ವ್ಯಾಸರಾಯರು ಪರಮಗುರುಗಳು ಪುರಂದರವಿಠಲನೇ ಪರದೈವ ಕಾಣಿರೋ” ಎಂದು ಶ್ರೀ ಪುರಂದರದಾಸರು ಈ ಮಾತನ್ನು ದಾಖಲಿಸಿದ್ದಾರೆ.

ನಾವು ಇಲ್ಲಿ ಗಮನಿಸಬೇಕಾದ ಅಂಶ, ಕಲಿಯಬೇಕಾದ ಪಾಠ ಬಹಳ ದೊಡ್ಡದಿದೆ.

ಶ್ರೀ ಸುರೇಂದ್ರರು ಸರ್ವಸಂಗಪರಿತ್ಯಾಗಿಗಳು. ಅನ್ನಾಹಾರಗಳನ್ನೂ ತ್ಯಜಿಸಿ ಮೂರು ಬಾರಿ ಇಡಿಯ ಭರತಭೂಮಿಗೇ ಪ್ರದಕ್ಷಿಣೆ ಮಾಡಿದ ತಪಸ್ವಿವರೇಣ್ಯರು. ಅಂಥಹ ವಿರಕ್ತಶಿಖಾಮಣಿಗಳು ಶ್ರೀ ವಿಷ್ಣುತೀರ್ಥರನ್ನು ಬಯಸಿಬಯಸಿ ಶಿಷ್ಯರನ್ನಾಗಿ ಪಡೆಯುತ್ತಾರೆ.

ಸಮಗ್ರ ಮಾಧ್ವಪರಂಪರೆಯ ಭೂಷಾಮಣಿಗಳಾದ ಶ್ರೀಮಚ್ಚಂದ್ರಿಕಾಚಾರ್ಯರು ತಮ್ಮಲ್ಲಿದ್ದ ವಿದ್ಯೆಯನ್ನು ಪ್ರೀತಿಯಿಂದ ಇವರಿಗೆ ಧಾರೆಯೆರಿದಿದ್ದರು. ಚಂದ್ರಿಕಾಚಾರ್ಯರಿಗೆ ವಿಜಯೀಂದ್ರರ ಮೇಲೆ ಎಷ್ಟು ಪ್ರೀತಿ ಎಂದರೆ, ಸುಮ್ಮನೇ ಕೇಳಿದರೆ ಇವರು ನೀಡುವದಿಲ್ಲ ಎಂದರಿತು ಸುರೇಂದ್ರತೀರ್ಥರು ಭೋಜನದ ಕಾಲದಲ್ಲಿ ಅವರನ್ನು ದಾನವನ್ನಾಗಿ ಪಡೆಯುತ್ತಾರೆ.

ಹೀಗೆ ಶ್ರೀಮಚ್ಚಂದ್ರಿಕಾಚಾರ್ಯರಂತಹ ಮುನಿವರೇಣ್ಯರಿಗೆ, ಶ್ರೀ ಸುರೇಂದ್ರತೀರ್ಥರಂತಹ ಯೋಗಿವರೆಯಣ್ಯರಿಗೆ ಮುದ್ದಾಗಿದ್ದವರು, ಅರ್ಥಾತ್ ಅವರ ಪ್ರೇಮಕ್ಕೆ, ವಾತ್ಸಲ್ಯಕ್ಕೆ,

ಅನುಗ್ರಹಕ್ಕೆ ಪಾತ್ರರಾಗಿದ್ದವರು ಶ್ರೀ ವಿಜಯೀಂದ್ರತೀರ್ಥಶ್ರೀಪಾದಂಗಳವರು.

ಮನುಷ್ಯ ತನ್ನ ಯೊಗ್ಯತೆಗೆ, ತಿಳುವಳಿಕೆಗೆ, ಅಭಿರುಚಿಗೆ ತಕ್ಕಂತೆ ಮತ್ತೊಬ್ಬರನ್ನು ಪ್ರೀತಿಸುತ್ತಾನೆ, ಆದರಿಸುತ್ತಾನೆ. ಅನೇಕ ಬಾರಿ ಮನುಷ್ಯನ ಪ್ರೀತಿ ಕ್ಷಣಿಕ, ತಾತ್ಕಾಲಿಕ. ರೂಪವನ್ನಷ್ಟೇ ನೋಡಿ ಮದುವೆಯಾದ ಹುಡುಗ ಹುಡುಗಿಯರು, ತಮ್ಮ ಸಂಗಾತಿಯಲ್ಲಿ ಸೌಂದರ್ಯ ಸ್ವಲ್ಪ ಕಡಿಮೆಯಾದರೆ ಪ್ರೀತಿ ಕಡಿಮೆ ಮಾಡಿಕೊಳ್ಳುತ್ತಾರೆ. ಹಣಕ್ಕಾಗಿ ಹತ್ತಿರ ಬಂದವರು, ಹಣವಿಲ್ಲದ ತಕ್ಷಣ ದೂರವಾಗುತ್ತಾರೆ. ಗುಣಕ್ಕಾಗಿ ಹತ್ತಿರ ಬಂದವರು ಮತ್ತೊಂದು ದೋಷ ಕಂಡಾಗ ದೂರವಾಗುತ್ತಾರೆ.

ಆದರೆ, ಮುನಿಗಳು ಯೋಗಿಗಳು ಹೀಗಲ್ಲ. ಅವರು ಜಗತ್ತನ್ನು ಕಾಣುವ ಬಗೆಯೇ ಬೇರೆ. ಅವರು ಒಮ್ಮೆ ವಾತ್ಸಲ್ಯ ತೋರಿದರೆ, ಒಮ್ಮೆ ನಮ್ಮಲ್ಲಿ ಪ್ರೇಮವನ್ನು ಮಾಡಿದರೆ, ಒಂದು ಬಾರಿ ಅನುಗ್ರಹವನ್ನು ಮಾಡಿದರೆ ಅದು ಶಾಶ್ವತವಾಗಿರುತ್ತದೆ.

ಶಾಶ್ವತವಾಗಿ ಉಳಿಯುವಂತಿದ್ದರೆ ಮಾತ್ರ ಅವರು ಅನುಗ್ರಹವನ್ನು ಮಾಡುತ್ತಾರೆ.

ಆವರ ಆ ಅನುಗ್ರಹವನ್ನು ಪಡೆಯಬೇಕಾದರೆ, ಆ ಮುನಿ ಯೋಗಿಗಳಿಗೆ ನಾವು ಮುದ್ದಾಗಬೇಕಾದರೆ, ನಮ್ಮಲ್ಲಿ ಪರಮಶ್ರೇಷ್ಠವಾದ ಸದ್ಗುಣಗಳಿರಬೇಕು. ನಮ್ಮ ರೂಪ, ಐಶ್ವರ್ಯ, ಅಧಿಕಾರ, ಸಂಪತ್ತುಗಳನ್ನು ನೋಡಿ ಮುನಿಯೋಗಿಗಳು ನಮ್ಮ ಮೇಲೆ ಅನುಗ್ರಹ ಮಾಡುವದಿಲ್ಲ. ಸ್ವಯಂ ಪರಮಾತ್ಮ ಈ ಮಾತನ್ನು ಭಗವದ್ಗೀತೆಯ ಹನ್ನೆರಡನೆಯ ಅಧ್ಯಾಯದಲ್ಲಿ ತಿಳಿಸಿ ಹೇಳುತ್ತಾನೆ. ಯಾವ ಗುಣಗಳಿದ್ದಾಗ ನಾವು ಶ್ರೀಹರಿಗೆ ಪ್ರಿಯರಾಗುತ್ತೇವೆ, ಯಾವ ಗುಣಗಳಿದ್ದಾಗೆ ನಾವು ಶ್ರೀಹರಿಯ ಭಕ್ತರಿಗೆ ಪ್ರಿಯರಾಗುತ್ತೇವೆ ಎನ್ನುವ ರಹಸ್ಯದ ತತ್ವವನ್ನು ಶ್ರೀಕೃಷ್ಣ ಎಂಟು ಶ್ಲೋಕಗಳಲ್ಲಿ ತಿಳಿಸಿಹೇಳುತ್ತಾನೆ.

**ಅದ್ವೇಷ್ಟಾ ಸರ್ವಭೂತಾನಾಂ**
**ಮೈತ್ರಃ ಕರುಣ ಏವ ಚ ।**
**ನಿರ್ಮಮೋ ನಿರಹಂಕಾರಃ**
**ಸಮದುಃಖಸುಖಃ ಕ್ಷಮೀ ।।**

**ಸಂತುಷ್ಟಃ ಸತತಂ ಯೋಗೀ**
**ಯತಾತ್ಮಾ ದೃಢನಿಶ್ಚಯಃ ।**
**ಮಯ್ಯರ್ಪಿತಮನೋಬುದ್ಧಿಃ**
**ಮದ್ಭಕ್ತಃ ಸ ಮೇ ಪ್ರಿಯಃ ||**

ಯಾವನು ಜಗತ್ತಿನ ಪ್ರತಿಯೊಬ್ಬರಿಗೂ ಹಿತವನ್ನು ಬಯಸುತ್ತಾನೆಯೋ,

ತನಗೆ ಸಮಾನರಾದ ಜನರಲ್ಲಿ ಅತಿಶಯವಾದ ಸ್ನೇಹವನ್ನು ಮಾಡುತ್ತಾನೆಯೋ,

ದೀನ ದಲಿತರಲ್ಲಿ ವಾತ್ಸಲ್ಯ ಕಾರುಣ್ಯಗಳನ್ನು ತೋರುತ್ತಾನೆಯೋ

ಜಗತ್ತಿನ ಎಲ್ಲ ಪದಾರ್ಥವೂ ಹರಿಯ ಅಧೀನ ಎಂದು ತಿಳಿಯುತ್ತಾನೆಯೋ,

ತನಗೆಷ್ಟೇ ಬೌದ್ಧಿಕ, ದೈಹಿಕ ಸಾಮರ್ಥ್ಯವಿದ್ದರೂ, ತಾನೇ ತಿಳಿದವನು, ತಾನೇ ಓದಿದವನು, ತಾನೇ ಬಲಿಷ್ಠ ಎಂಬ ಅಹಂಕಾರವನ್ನು ಯಾರು ತೋರುವದಿಲ್ಲವೋ,

ಪರಮಾತ್ಮ ನೀಡಿದ್ದನ್ನು ಸ್ವೀಕರಿಸಿ ಯಾವನು ಯಾವಾಗಲೂ ಸಂತುಷ್ಟನಾಗಿರುತ್ತಾನೆಯೋ

ಯಾವನು ಸತ್ಕರ್ಮಗಳಿಂದ, ಧ್ಯಾನದಿಂದ ಅಂತರ್ಯಾಮಿಯನ್ನು ಮೆಚ್ಚಿಸಬಲ್ಲನೋ,

ಯಾವನು ತನ್ನ ಮನಸ್ಸು, ದೇಹ, ಇಂದ್ರಿಯಗಳನ್ನು ನಿಗ್ರಹಿಸಬಲ್ಲನೋ,

ಯಾವನಿಗೆ ಶಾಸ್ತ್ರತತ್ವದ ವಿಷಯಗಳಲ್ಲಿ ಸಂಶಯವಿರುವದಿಲ್ಲವೋ

ಯಾವನು ತನ್ನ ಮನಸ್ಸು ಬುದ್ಧಿಗಳನ್ನು ಶ್ರೀಹರಿಗೆ ಸಮರ್ಪಿಸಿಕೊಂಡಿರುತ್ತಾನೆಯೋ,

ಅಂತಹವನು ನನ್ನ ಭಕ್ತ, ಅವನು ನನಗೆ ಪ್ರಿಯನಾದವನು ಎನ್ನುತ್ತಾನೆ ಶ್ರೀಕೃಷ್ಣ.

ಅಷ್ಟೇ ಅಲ್ಲ,

**ಯಸ್ಮಾನ್ನೋದ್ವಿಜತೇ ಲೋಕೋ**
**ಲೋಕಾನ್ನೋದ್ವಿಜತೇ ಚ ಯಃ ।**

**ಹರ್ಷಾಮರ್ಷಭಯೋದ್ವೇಗೈಃ**
**ಮುಕ್ತೋ ಯಃ ಸ ಚ ಮೇ ಪ್ರಿಯಃ ||**

ಯಾವನಿಂದ ಜಗತ್ತಿಗೆ ಭಯವಿಲ್ಲ, ಯಾವನು ಜಗತ್ತಿನಿಂದ ಭಯ ಬೀಳುವದಿಲ್ಲ ಅರ್ಥಾತ್ ಶ್ರೀಹರಿ ನನ್ನನ್ನು ರಕ್ಷಿಸಿಯೇ ರಕ್ಷಿಸುತ್ತಾನೆ ಎಂಬ ದೃಢವಿಶ್ವಾಸವನ್ನು ತಾಳಿರುತ್ತಾನೆ

ಯಾವನು ಮದಾಂಧನಾಗಿ ಅಧರ್ಮವನ್ನು ಮಾಡಲು ಮುಂದಾಗುವದಿಲ್ಲ, ಬದಲಾಗಿ ಶ್ರದ್ಧೆಯಿಂದ ಧರ್ಮವನ್ನು ಆಚರಿಸುತ್ತಾನೆ,

ಯಾವನಲ್ಲಿ ಕೋಪ, ಭಯ, ಉದ್ವೇಗಗಳು ಇಲ್ಲ ಅಂಥಹವನು ನನಗೆ ಪ್ರೀತ್ಯಾಸ್ಪದ ಎನ್ನುತ್ತಾನೆ ಶ್ರೀಕೃಷ್ಣ.

**ಅನಪೇಕ್ಷಃ ಶುಚಿರ್ದಕ್ಷಃ**
**ಉದಾಸೀನೋ ಗತವ್ಯಥಃ |**
**ಸರ್ವಾರಂಭಪರಿತ್ಯಾಗೀ**
**ಯೋ ಮದ್ಭಕ್ತಃ ಸ ಮೇ ಪ್ರಿಯಃ ||**

ವಿಷ್ಣು ವೈಷ್ಣವರ ಸಂಗವನ್ನು ಹೊರತು ಪಡಿಸಿ ಮತ್ತೊಂದು ಬೇಡ ಎನ್ನುವ ವ್ಯಕ್ತಿ,

ದೇಹ ಮನಸ್ಸುಗಳನ್ನು ಶುದ್ಧಿಯನ್ನಾಗಿಟ್ಟುಕೊಂಡ ವ್ಯಕ್ತಿ,

ದೇವರನ್ನು ದೂರಮಾಡಿಸುವ ವಿಷಯಗಳಲ್ಲಿ ಆಸಕ್ತಿರಹಿತನಾದ ವ್ಯಕ್ತಿ,

ಬೇರೆಯವರು ಅಪಕಾರ ಮಾಡಿದರೂ ವ್ಯಥೆ ಪಡದ ವ್ಯಕ್ತಿ ನನಗೆ ಪ್ರಿಯನಾದ ವ್ಯಕ್ತಿ ಎನ್ನುತ್ತಾನೆ ಸ್ವಾಮಿ ಶ್ರೀಕೃಷ್ಣ.

**ಯೋ ನ ಹೃಷ್ಯತಿ ನ ದ್ವೇಷ್ಟಿ**
**ನ ಶೋಚತಿ ನ ಕಾಂಕ್ಷತಿ ।**
**ಶುಭಾಶುಭಪರಿತ್ಯಾಗೀ**
**ಭಕ್ತಿಮಾನ್ ಯಃ ಸ ಮೇ ಪ್ರಿಯಃ ।।**

ಜ್ಞಾನಿಯಾಗುವ ಮೊದಲಲ್ಲ, ಜ್ಞಾನಿಯಾದ ನಂತರವೂ ಯಾವನು ಹರ್ಷ, ದ್ವೇಷ, ಶೋಕ, ಆಕಾಂಕ್ಷೆಗಳಿಂದ ದೂರವಾಗಿರುತ್ತಾನೆ, ಸಾಧನೆಗೆ ಪ್ರತಿಬಂಧಕವಾದ ಯಾವ ಶುಭಾಶುಭಗಳನ್ನೂ

ಯಾವನು ಅಪೇಕ್ಷಿಸುವದಿಲ್ಲ ಅವನು ನನಗೆ ಪ್ರಿಯನಾದವನು ಎನ್ನುತ್ತಾನೆ ಶ್ರೀಕೃಷ್ಣ.

**ಸಮಃ ಶತ್ರೌ ಚ ಮಿತ್ರೇ ಚ ತಥಾ**
**ಮಾನಾಪಮಾನಯೋಃ ।**
**ಶೀತೋಷ್ಣಸುಖದುಃಖೇಷು**
**ಸಮಃ ಸಂಗವಿವರ್ಜಿತಃ ॥**

**ತುಲ್ಯನಿಂದಾಸ್ತುತಿರ್ಮೌನೀ**
**ಸಂತುಷ್ಟೋ ಯೇನ ಕೇನಚಿತ್ ।**
**ಅನಿಕೇತಃ ಸ್ಥಿರಮತಿಃ**
**ಭಕ್ತಿಮಾನ್ ಮೇ ಪ್ರಿಯೋ ನರಃ ॥**

ಶತ್ರು ಮಿತ್ರರನ್ನು, ಮಾನ ಅವಮಾನಗಳನ್ನು, ಸುಖದುಃಖಗಳನ್ನು, ನಿಂದಾಸ್ತುತಿಗಳನ್ನು ಯಾವನು ಏಕಪ್ರಕಾರವಾಗಿ ಸ್ವೀಕರಿಸುತ್ತಾನೆ, ಅರ್ಥಾತ್ ಅವುಗಳಿಂದ ಹಿಗ್ಗುವದಿಲ್ಲ ಕುಗ್ಗುವದಿಲ್ಲಯಲ್ಲ,

ಯಾವನು ಪರಮಾತ್ಮನನ್ನೇ ಆಶ್ರಯಿಸಿ ಸದಾ ಸಂಚರಣಶೀಲನಾಗಿದ್ದಾನೆ,

ಯಾವನಿಗೆ ಶಾಸ್ತ್ರದ ಕುರಿತು ನಿಶ್ಚಿತವಾದ ಜ್ಞಾನವಿದೆ ಅವನು ನನಗೆ ಪ್ರಿಯ ಎನ್ನುತ್ತಾನೆ ಶ್ರೀಕೃಷ್ಣ.

ಎಲ್ಲದಕ್ಕಿಂತ ಮುಖ್ಯವಾಗಿ

**ಯೇ ತು ಧರ್ಮ್ಯಾಮೃತಮಿದಂ**
**ಯಥೋಕ್ತಂ ಪರ್ಯುಪಾಸತೇ ।**
**ಶ್ರದ್ದಧಾನಾ ಮತ್ಪರಮಾ**
**ಭಕ್ತಾಸ್ತೇಽತೀವ ಮೇ ಪ್ರಿಯಾಃ ।।**

ಯಾರು ಗೀತಾ- ಭಾರತ-ವೇದಾದಿಗಳನ್ನು ಅಧ್ಯಯನ ಮಾಡುತ್ತ ಅಲ್ಲಿ ಹೇಳಿದಂತೆ ಜೀವನ ನಡೆಸುತ್ತಾರೆ, ಶ್ರೀಕೃಷ್ಣನೇ ಸರ್ವಸ್ವ ಎಂದು ನಂಬಿ ನಡೆಯುತ್ತಾರೆ ಅವರು ನನಗೆ ಅತ್ಯಂತ ಪ್ರೇಮಾಸ್ಪದರು ಎಂದು ಶ್ರೀಕೃಷ್ಣ ಉದ್ಘೋಷಿಸಿದ್ದಾನೆ.

ಶ್ರೀ ವಿಜಯೀಂದ್ರತೀರ್ಥಶ್ರೀಪಾದಂಗಳವರು ಮೇಲೆ ಹೇಳಿದ ಗುಣಗಳ ಸಾಕಾರಮೂರ್ತಿಗಳಾಗಿದ್ದ ಕಾರಣಕ್ಕಾಗಿಯೇ ಶ್ರೀಕೃಷ್ಣನಿಗೆ

ಪರಮಪ್ರಿಯರಾಗಿದ್ದರು, ಶ್ರೀಕೃಷ್ಣನ ಪರಮಭಕ್ತರಾದ ಭಾಗವತೋತ್ತಮರಾದ ಶ್ರೀಮಚ್ಚಂದ್ರಿಕಾಚಾರ್ಯರು ಮತ್ತು ಶ್ರೀ ಸುರೇಂದ್ರತೀರ್ಥರಂತಹ ಮುನಿಯೋಗಿಗಳಿಗೆ ಪ್ರೀತ್ಯಾಸ್ಪದರಾಗಿದ್ದರು. ವಿಜಯೀಂದ್ರರನ್ನು ಬಿಡಲು ಚಂದ್ರಿಕಾಚಾರ್ಯರಿಗೆ ಮನಸ್ಸಿಲ್ಲ, ವಿಜಯಿಂದ್ರರನ್ನು ಪಡೆಯಲೇ ಬೇಕು ಎಂಬ ಬಯಕೆ ಶ್ರೀ ಸುರೇಂದ್ರರಿಗೆ. ವಿಜಯೀಂದ್ರಸ್ವಾಮಿಗಳು ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳಿದ ಸದ್ಗುಣಗಳ ಸಾಕಾರಮೂರ್ತಿಗಳಾಗಿದ್ದರು ಎನ್ನುವ ಕಾರಣಕ್ಕೆ ಅವರಿಗೆ ಈ ಮಹಾನುಭಾವರ ಈ ಪರಿಯ ವಾತ್ಸಲ್ಯ ದೊರೆಯಲು ಸಾಧ್ಯವಾಯಿತು.

ಅಷ್ಟೇ ಅಲ್ಲ, ಶ್ರೀ ವಿಜಯೀಂದ್ರರ ಚರಿತ್ರೆಯಲ್ಲಿ ಈ ಸದ್ಗುಣಗಳಿಗೆ ದೃಷ್ಟಾಂತವಾಗಿ ಒಂದೊಂದು ಪ್ರತ್ಯೇಕ ಘಟನೆಯನ್ನೇ ಕೇಳುತ್ತೇವೆ. ತಮ್ಮೊಡನೆ ಇಡಿಯ ಜೀವನ ಸೆಣಸಾಡಿದ ಅಪ್ಪಯ್ಯದೀಕ್ಷಿತರಲ್ಲಿಯೂ ಅವರು ಅನಾದರವನ್ನು ತೋರಲಿಲ್ಲ, ದ್ವೇಷವನ್ನು ಮಾಡಲಿಲ್ಲ, ಅಪಾರವಾದ ಸಂಪತ್ತನ್ನು ಶ್ರೀಮಠಕ್ಕೆ ಗಳಿಸಿ ನೀಡಿದರೂ ಅದರಲ್ಲಿ ಅವರು ಅಭಿಮಾನವನ್ನು

ತಾಳಲಿಲ್ಲ, ದೇವರಿಗೆ ಅಪ್ರಿಯವಾದದ್ದನ್ನು ಮಾಡಲಿಲ್ಲ, ಪ್ರಿಯವಾದದ್ದನ್ನು ಮಾಡದೇ ಇರಲಿಲ್ಲ, ದ್ವೇಷಿಗಳು ನಿಂದಿಸಿದಾಗ ಕುಗ್ಗಲಿಲ್ಲ, ಭಕ್ತರು ಗೌರವಿಸಿದಾಗ ಹಿಗ್ಗಲಿಲ್ಲ, ನಿರಂತರ ಸಂಚರಣಶೀಲರಾಗಿ ದೀನರನ್ನು ಅನುಗ್ರಹಿಸಿದರು, ಎಲ್ಲದಕ್ಕಿಂತ ಮುಖ್ಯವಾಗಿ ನೂರಾ ನಾಲ್ಕು ಗ್ರಂಥಗಳನ್ನು ರಚಿಸಿ ತಮ್ಮ ಇಡಿಯ ಜೀವನದಲ್ಲಿ ಪರಮಾತ್ಮನನ್ನು ಶಾಸ್ತ್ರಗಳಿಂದ ಆರಾಧಿಸಿದರು. ಅದಕ್ಕಾಗಿ ಮುನಿಯೋಗಿಗಳಿಗೆ ಮುದ್ದಾದರು ನಮ್ಮ ಶ್ರೀ ವಿಜಯೀಂದ್ರರು, ಇಡಿಯ ಮಾಧ್ವಸಮಾಜಕ್ಕೆ ಗುರುಸ್ಥಾನದಲ್ಲಿ ವಿರಾಜಮಾನರಾದರು.

ಮುದ್ದಾಗಿ ಇರಬೇಕು ಮುನಿಯೋಗಿಗಳಿಗೆ ಎಂಬ ಮಾತು ಯಾವಾಗಲೂ ನಮ್ಮ ಮನಸ್ಸಿನಲ್ಲಿರಬೇಕು. ನಮ್ಮಿಂದ ಉಪಯೋಗವಿರುವ ಕ್ಷುದ್ರ ಜನರಿಗೆ ನಾವು ಇಷ್ಟವಾದರೆ ಉಪಯೋಗವಿಲ್ಲ, ನಾವು ನಮ್ಮ ಹಿರಿಯರಿಗೆ ಮುದ್ದಾಗಬೇಕು. ಕ್ಷುದ್ರರು ಯಾವಾಗಲೂ ಕ್ಷುದ್ರರೇ. ತಮಗೆ ಅನುಕೂಲವಾದಾಗ ಗೌರವಿಸಿ, ತಮಗೆ

ಪ್ರತಿಕೂಲವಾದಾಗ ನಿಂದಿಸುವ ಕ್ಷುದ್ರರಿಂದ ದೂರವೇ ಇರಬೇಕು.

ಆದರೆ, ನಮಗಿಂತ ಜ್ಞಾನಭಕ್ತಿಗಳಲ್ಲಿ ಹಿರಿಯರಿಗೆ ಮುದ್ದಾಗಬೇಕು. ಜ್ಞಾನಿಗಳಿಗೆ ಮುದ್ದಾಗಬೇಕು.

ತತ್ವವನ್ನು ಉಪದೇಶಿಸಬಲ್ಲ ಗಂಡನಿಗೆ ಹೆಂಡತಿ ಮುದ್ದಾಗಬೇಕು, ಯಾಜ್ಞವಲ್ಕ್ಯರಿಗೆ ಮೈತ್ರೇಯೀ ಮುದ್ದಾದಂತೆ.

ವೇದವ್ಯಾಸದೇವರಿಗೆ ಶುಕಾಚಾರ್ಯರು ಮುದ್ದಾದಂತೆ ಜ್ಞಾನಿಯಾದ ನಮ್ಮ ತಂದೆತಾಯಿಯರಿಗೆ ನಾವು ಮುದ್ದಾಗಬೇಕು.

ಶ್ರೀ ಸುರೇಂದ್ರತೀರ್ಥರಿಗೆ ಶ್ರೀ ಚಂದ್ರಿಕಾಚಾರ್ಯರಿಗೆ ಶ್ರೀ ವಿಜಯೀಂದ್ರರು ಮುದ್ದಾದಂತೆ ನಮ್ಮ ಗುರುಗಳಿಗೆ ನಾವು ಮುದ್ದಾಗಬೇಕು. ಅವರು ನಮ್ಮನ್ನು ಪ್ರೀತಿಸಬೇಕು, ಅವರು ನಮ್ಮಲ್ಲಿ ವಾತ್ಸಲ್ಯವನ್ನು ಹರಿಸಬೇಕು.

ಸ್ವಯಂ ಶ್ರೀಕೃಷ್ಣ ತನಗೆ ಯಾರು ಪ್ರಿಯರು ಎನ್ನುವದನ್ನು ಮೇಲಿನ ಶ್ಲೋಕಗಳಲ್ಲಿ ತಿಳಿಸಿದ್ದಾನೆ.

ಅವುಗಳ ನಿತ್ಯಾನುಸಂಧಾನ ನಮ್ಮಲ್ಲಿರಬೇಕು. ಅವನು ಹೇಳಿದ ಅಷ್ಟು ಸದ್ಗುಣಗಳಲ್ಲಿ ಒಂದಾದರೂ ನಮ್ಮಲ್ಲಿದೆಯಾ ಎನ್ನುವದನ್ನು ನಾವು ಮೇಲಿಂದ ಮೇಲೆ ಪರೀಕ್ಷಿಸಿಕೊಳ್ಳಬೇಕು, ಆ ಸದ್ಗುಣಗಳ ಸಂಪಾದನೆಯಲ್ಲಿ ನಿರಂತರ ತಲ್ಲೀನರಾಗಬೇಕು. ಗಳಿಸಿಕೊಂಡು ವಿಷ್ಣು ವೈಷ್ಣವರಿಗೆ ಪ್ರೀತ್ಯಾಸ್ಪದರಾಗಬೇಕು, ಮುನಿಯೋಗಿಗಳಿಗೆ ಮುದ್ದಾಗಬೇಕು.

ಈ ಸದ್ಗುಣಗಳ ಸಾಕಾರಮೂರ್ತಿಯಾದ ಶ್ರೀ ವಿಜಯೀಂದ್ರತೀರ್ಥಶ್ರೀಪಾದಂಗಳವರ ಭೂರಿ ಅನುಗ್ರಹ ನಮ್ಮ ಮೇಲಿರಲಿ, ಜಗತ್ತಿನ ಸಮಗ್ರ ಸಜ್ಜನ ಸಮುದಾಯಾದ ಮೇಲಿರಲಿ. ನಾವೆಲ್ಲರೂ ಶ್ರೀಕೃಷ್ಣನಿಗೆ, ಭಾಗವತೋತ್ತಮರಿಗೆ ಪ್ರಿಯರಾಗುವಂತಾಗಲಿ ಎಂದು ಶ್ರೀ ವಿಜಯೀಂದ್ರಸ್ವಾಮಿಗಳಲ್ಲಿ ಸಾಷ್ಟಾಂಗನಮಸ್ಕಾರಪೂರ್ವಕವಾಗಿ ಬೇಡಿಕೊಳ್ಳೋಣ.

ಶ್ರೀಮಚ್ಚಂದ್ರಿಕಾಚಾರ್ಯರ ವಿದ್ಯಾಶಿಷ್ಯರಾಗಿ, ಶ್ರೀ ಸುರೇಂದ್ರತೀರ್ಥರ ಉತ್ತರಾಧಿಕಾರಿಗಳಾಗಿ ಶ್ರೀ

ಸುಧೀಂಧ್ರತೀರ್ಥರ ಗುರುಗಳಾಗಿ ಶ್ರೀ ರಾಘವೇಂದ್ರಸ್ವಾಮಿಗಳನ್ನು ಜಗತ್ತಿಗೆ ಅನುಗ್ರಹಿಸಿದ ಶ್ರೀ ವಿಜಯೀಂದ್ರತೀರ್ಥಗುರುಚರಣರ ಪಾದಾರವಿಂದಕ್ಕೆ ಸಮಗ್ರ ಜೀವದ ಭಕ್ತಿಯಿಂದ ನನ್ನ ಸರ್ವಸ್ವವನ್ನೂ ಸಮರ್ಪಿಸಿಕೊಳ್ಳುತ್ತೇನೆ.

ಭಕ್ತಾನಾಂ ಮಾನಸಾಂಬೋಜ-
ಭಾನವೇ ಕಾಮಧೇನವೇ ।
ನಮತಾಂ ಕಲ್ಪತರವೇ
ಶ್ರೀ ಜಯೀಂದ್ರಗುರವೇ ನಮಃ ॥

— ವಿಷ್ಣುದಾಸ ನಾಗೇಂದ್ರಾಚಾರ್ಯ



# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು
ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,
ಶ್ರೀ ವೇದವ್ಯಾಸದೇವರಿಗೆ
ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491